# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 466 |
| ಮಾನ್ಯ ಸದಸ್ಯರ ಹೆಸರು | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 22.07.2019 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಹಿಂದುಳಿದ ವರ್ಗಗಳ ವಸತಿನಿಲಯಗಳಲ್ಲಿ ಅಗತ್ಯ ಮೂಲ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮೂಲಭೂತ ಸೌಲಭ್ಯಗಳೊಂದಿಗೆ ಅವುಗಳ ಸ್ವಚ್ಛತೆ ಮತ್ತು ದುರಸ್ತಿ ಕಾರ್ಯಗಳನ್ನು ಯಾವಾಗ ಮಾಡಲಾಗುವುದು; (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವೊಂದು ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗನುಗುಣವಾಗಿ ಶೌಚಾಲಯ ಮತ್ತು ಸ್ನಾನಗೃಹಗಳ ಕೊರತೆ ಇರುತ್ತದೆ, ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆ ಹಾಗೂ ನಿವೇಶನ ಲಭ್ಯತೆಯ ಅನುಸಾರ ಈ ವಿದ್ಯಾರ್ಥಿನಿಲಯಗಳಿಗೆ ಹಂತ ಹಂತವಾಗಿ ಸ್ವಂತ ಕಟ್ಟಡಗಳನ್ನು ನಿರ್ಮಿಸಿ, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ.<br><br>ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯಾಬಲಕ್ಕನುಗುಣವಾಗಿ ಶೌಚಾಲಯ / ಸ್ನಾನ ಗೃಹಗಳ ಸ್ವಚ್ಛತೆ ಹಾಗೂ ಸ್ವಚ್ಛತಾ ಸಾಮಗ್ರಿಗಳಿಗಾಗಿ ಈ ಕೆಳಕಂಡಂತೆ ವೆಚ್ಚ ಭರಿಸಲಾಗುತ್ತಿದ್ದು, ಸದರಿ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ನಿಲಯಗಳನ್ನು ಸ್ವಚ್ಛವಾಗಿಡಲು ಕ್ರಮವಹಿಸಲಾಗುತ್ತಿದೆ.<br><br>**1. ಶೌಚಾಲಯಗಳ / ಆವರಣದ ಸ್ವಚ್ಛತೆ** (ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಪ್ರತಿ ತಿಂಗಳಿಗೆ)<br>50 ಸಂಖ್ಯಾಬಲದ ವರೆಗೆ — ರೂ.1,000/-<br>51 ರಿಂದ 100 ಸಂಖ್ಯಾಬಲದ ವರೆಗೆ — ರೂ.1,250/-<br>101 ರಿಂದ 150 ರವರೆಗೆ — ರೂ.1,500/-<br>151 ಕ್ಕೂ ಮೇಲ್ಪಟ್ಟು — ರೂ.2,000/-<br>ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಲು (ವಾರ್ಷಿಕ) — ರೂ.5,000/-<br><br>**2. ಸ್ವಚ್ಛತಾ ಸಾಮಗ್ರಿಗಳಿಗಾಗಿ** (ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಪ್ರತಿ ತಿಂಗಳಿಗೆ)<br>50 ಸಂಖ್ಯಾಬಲದ ವರೆಗೆ — ರೂ.500/-<br>51 ರಿಂದ 100 ಸಂಖ್ಯಾಬಲದ ವರೆಗೆ — ರೂ.750/-<br>101 ರಿಂದ 150 ರವರೆಗೆ — ರೂ.1,000/-<br>151 ಕ್ಕೂ ಮೇಲ್ಪಟ್ಟು — ರೂ.1,250/-<br><br>ಕಲಬುರಗಿ ಜಿಲ್ಲೆ ಮತ್ತು ಯಾದಗಿರಿ ಜಿಲ್ಲೆಯಲ್ಲಿನ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯ ದುರಸ್ಥಿ, ಶೌಚಾಲಯ, ಸ್ನಾನಗೃಹ, ಸುಣ್ಣ-ಬಣ್ಣ ಹಾಗೂ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಲು ಕ್ರಮವಾಗಿ ರೂ.21.28 ಲಕ್ಷ ಹಾಗೂ ರೂ.21.28 ಲಕ್ಷಗಳ ಅನುದಾನದಲ್ಲಿ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |

...2

| | | |
|---|---|---|
| ಆ | ಮೇಲ್ಕಂಡ ಜಿಲ್ಲೆಗಳಲ್ಲಿ ಎಷ್ಟು ಹಿಂದುಳಿದ ವರ್ಗಗಳ ವಸತಿನಿಲಯಗಳಿವೆ? (ಸಂಪೂರ್ಣ ವಿವರ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 128 ವಿದ್ಯಾರ್ಥಿನಿಲಯಗಳು ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 65 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ.<br>ವಿದ್ಯಾರ್ಥಿನಿಲಯಗಳ ವಿವರಗಳನ್ನು ಇಲಾಖೆಯ ವೆಬ್‌ಸೈಟ್ www.backwardclasses.kar.nic.in ನೀಡಲಾಗಿದೆ. |

ಸಂ: ಹಿಂವಕ 155 ಬಿಎಂಎಸ್ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.